**ದಿನಾಂಕಃ06.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ. ಆರೋಪಿ ಪರ ವಕೀಲರಿಂದಃ**

ದಿ.22.08.2008 ರಂದು ರೂ.5 ಲಕ್ಷ, ದಿ.08.02.2013 ರಂದು ರೂ.5 ಲಕ್ಷ, ದಿ.28.10.2015 ರಂದು ರೂ.4,50,000/- ಮತ್ತು ದಿ.16.03.2016 ರಂದು ರೂ.4,50,000/- ಹಣವನ್ನು ದೂರುದಾರರು ನನಗೆ ನಗದಾಗಿ ಕೊಟ್ಟಿರುವುದಿಲ್ಲ. ದಿ.01.02.2017 ರಂದು ದೂರುದಾರರ ಕಡೆಯಿಂದ ನನಗಾಗಲಿ ಅಥವಾ ನನ್ನ ಹೆಂಡತಿಗಾಗಲಿ ರೂ.10 ಲಕ್ಷ ಹಣ ಕೊಟ್ಟಿರುವುದಿಲ್ಲ. ದಿ.20.03.2017 ರಂದು ರೂ.2 ಲಕ್ಷ, ದಿ.02.04.2017 ರಂದು ರೂ.60,000/-, ದಿ.02.05.2017 ರಂದು ರೂ.70,000/-, ದಿ.02.06.2017 ರಂದು ರೂ.80,000/-, ದಿ.02.07.2017 ರಂದು ರೂ.40,000/-, ದಿ.02.08.2017 ರಂದು ರೂ.10 ಲಕ್ಷ, ದಿ.02.09.2017 ರಂದು ರೂ.42,250/-, ದಿ.12.09.2017 ರಂದು ರೂ.10 ಲಕ್ಷ ಮತ್ತು ದಿ.02.10.2017 ರಂದು ರೂ.96,500/- ಹಣವನ್ನು ದೂರುದಾರರು ನನಗೆ ಇಷ್ಟು ಹಣವನ್ನು ನಗದಾಗಿ ಕೊಟ್ಟಿಲ್ಲ. ದಿ.27.06.2018 ರಂದು ಚಿನ್ನವನ್ನು ಅಡವು ಇಟ್ಟು ರೂ.10 ಲಕ್ಷ ಕೊಟ್ಟಿದ್ದಾರೆ ಎಂಬ ವಿಷಯ ಸುಳ್ಳಿದೆ. ದಿ.01.01.2019 ರಂದು ಮತ್ತು ದಿ.03.01.2019 ರಂದು ದೂರುದಾರರ ಬ್ಯಾಂಕ್ ಖಾತೆಯಿಂದ ನನ್ನ ಬ್ಯಾಂಕ್ ಸಾಲದ ಖಾತೆಗೆ ರೂ.20 ಲಕ್ಷ ಹಣ ಬಂದಿರುವುದಿಲ್ಲ. ಜನವರಿ 2019 ರಲ್ಲಿ ದೂರುದಾರರು ಯಾವುದೇ ಬ್ಯಾಂಕಿನಿಂದ ರೂ.20 ಲಕ್ಷ ಸಾಲದ ಹಣ ಪಡೆದಿರುವುದಿಲ್ಲ. ದಿ.03.01.2019 ರಂದು ರೂ.10 ಲಕ್ಷ ನಗದು ಹಣವನ್ನು ನನಗೆ ಕೊಟ್ಟಿಲ್ಲ. ಜನವರಿಯಿಂದ ಅಕ್ಟೋಬರ್ 2020 ರ ವರೆಗೆ ದೂರುದಾರರು ರೂ.10,42,780/- ಹಣವನ್ನು ನನ್ನ ಪರವಾಗಿ ನನ್ನ ಯಾವುದೇ ಸಾಲದ ಹಣ ಕಂತಿನ ರೂಪದಲ್ಲಿ ಕಟ್ಟಿರುವುದಿಲ್ಲ. ನಾನು ಶುಶ್ರುತಿ ಸಹಕಾರಿ ಬ್ಯಾಂಕಿನಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-5.pdf

www.ecourtsindia.com

ಯಾವತ್ತು ಸಾಲದ ಹಣ ಪಡೆದಿಲ್ಲ. ಕಳೆದ 25 ವರ್ಷಗಳಿಂದ ದೂರುದಾರರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಹೀಗಾಗಿ ಅವರು ನನಗೆ ನಗದು ರೂಪದಲ್ಲಿ ಯಾವುದೇ ಹಣ ಕೊಡುವ ಆರ್ಥಿಕ ಸಾಮರ್ಥ್ಯ ಹೊಂದಿರುವುದಿಲ್ಲ. ಅದೇ ರೀತಿ ಕಳೆದ 25 ವರ್ಷಗಳಿಂದ ಅವರ ಹೆಸರಿನ ಮೇಲೆ ಯಾವುದೇ ಚಿರಆಸ್ತಿ ಇರುವುದಿಲ್ಲ. ನಮ್ಮ ಮಾವನವರ ಮಗನು ಅನಾರೋಗ್ಯದಿಂದ ತೀರಿಕೊಂಡ ಪ್ರಯುಕ್ತ ನಾನೇ ದತ್ತು ಪುತ್ರನಂತೆ ಅವರ ಪಾಲನೇ ಪೋಷಣೆ ಮಾಡುತ್ತಿದ್ದೇನೆ. ದೂರುದಾರರ ಹೆಂಡತಿಯವರು ಪಡೆದಿರುವ ಗೃಹ ಸಾಲದ ಹಣದಲ್ಲಿ ನಾನು ಯಾವುದೇ ಹಣವನ್ನು ಪಡೆದುಕೊಂಡಿಲ್ಲ. ನಾನು ಸಾಲ ಪಡೆದುಕೊಂಡಿದ್ದೇನೆ ಎಂದು ಒಪ್ಪಿಕೊಂಡು ದೂರುದಾರರಿಗೆ ಯಾವುದೇ ಪತ್ರವನ್ನು ಬರೆದುಕೊಟ್ಟಿಲ್ಲ. ನಿ.ಪಿ.17ರ ಮೇಲಿರುವ ಸಹಿ ನನ್ನದಲ್ಲ. ಅದೇ ರೀತಿ ನಿ.ಪಿ.17ರ ಛಾಪಾ ಕಾಗದವನ್ನು ನಾನು ಖರೀದಿಸಿಲ್ಲ.

ಈ ಕೇಸಿನಲ್ಲಿ ಹೇಳಿರುವಂತೆ ನಾನು ದೂರುದಾರರಿಂದ ಒಟ್ಟು ರೂ.1,05,31,530/- ಹಣವನ್ನು ಯಾವತ್ತು ಪಡೆದುಕೊಂಡಿಲ್ಲ. ನಾನು ಈ ಕೇಸಿನ ಸಾಲದ ಹಣದ ಮರುಪಾವತಿಗಾಗಿ ವಿವಾದಿತ ಚೆಕ್ಕನ್ನು ಕೊಟ್ಟಿಲ್ಲ, ಆದರೆ ನಮ್ಮ ಅತ್ತೆಯವರು ಗೃಹ ಸಾಲ ಪಡೆಯುವ ವೇಳೆ ಅವರ ಸಾಲದ ಹಣ ಭದ್ರತೆಗಾಗಿ ಅವರಿಗೆ ವಿವಾದಿತ ಚೆಕ್ಕನ್ನು ಕೊಟ್ಟಿದ್ದೇನೆ. ವಿವಾದಿತ ಚೆಕ್ಕಿನ ಮೇಲೆ ನಾನು ಬರೆದಿಲ್ಲ. ಆದ್ದರಿಂದ ಈ ಕೇಸಿನ ವಿವಾದಿತ ಸಾಲದ ಹಣ ಕೊಡುವ ಬಾಧ್ಯಸ್ಥಿಕೆ ಹೊಂದಿರುವುದಿಲ್ಲ ಹೀಗಾಗಿ ಈ ದೂರನ್ನು ವಜಾ ಮಾಡಿ ನನಗೆ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-5.pdf

**<u>ದೂರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ ಆಲಿಸಿ ನೀಡಲಾಯಿತು.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓದಿ ಹೇ.ಕೇ.ಸ.ಇ.)

(ಭೋಲಾ ಪಂಡಿತ)
20ನೇ ಅ.ಮು.ಮ.ದಂ.,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-5.pdf